ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2065
ಸದಸ್ಯರ ಹೆಸರು	:	ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17-03-2022
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ವಾಸ ಪ್ರಮಾಣ ಪತ್ರ (ಓ.ಸಿ) ಒಪ್ಪಿಗೆ ಪ್ರಮಾಣ ಪತ್ರ (ಸಿ.ಸಿ) ಇಲ್ಲದಿರುವ ವಾಣಿಜ್ಯ ಹಾಗೂ ವಸತಿ ಆಸ್ತಿಗಳಿಗೆ ನೀರಿನ ಬಿಲ್ಲಿನಲ್ಲಿ ದಂಡ ರೂಪದಲ್ಲಿ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ನೀರು ಸರಬರಾಜು ವಿನಿಯಮಗಳು, 2015ರ ವಿನಿಯಮ 5.4ಕ್ಕೆ ತಿದ್ದುಪಡಿ ಮಾಡಿ ಬೆಂಗಳೂರು ಜಲಮಂಡಳಿಯು ದಿನಾಂಕ: 25.02.2016ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯನುಸಾರ ನೆಲ ಮತ್ತು ಎರಡು ಅಂತಸ್ತು ಮೇಲ್ಪಟ್ಟ ಕಟ್ಟಡಗಳಿಗೆ ನೀರು ಮತ್ತು ಒಳಚರಂಡಿ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದಾಗ, ಬಿ.ಬಿ.ಎಂ.ಪಿ. ಹಾಗೂ ಸ್ಥಳೀಯ ಸಂಸ್ಥೆಗಳಿಂದ ನೀಡಿರುವ ವಾಸ ಪ್ರಮಾಣ ಪತ್ರ (ಓ.ಸಿ) ಸಲ್ಲಿಸದಿದ್ದಲ್ಲಿ ಅಂತಹ ಕಟ್ಟಡಗಳಿಗೆ ನೀರು ಮತ್ತು ಒಳಚರಂಡಿ ಶುಲ್ಕದ ಮೇಲೆ ಗೃಹ ಕಟ್ಟಡಗಳಿಗೆ ಶೇಕಡ 50 ರಷ್ಟು ಮತ್ತು ಗೃಹೇತರ ಕಟ್ಟಡಗಳಿಗೆ ಶೇಕಡ 100 ರಷ್ಟು ದಂಡವನ್ನು ವಿಧಿಸಲಾಗುತ್ತಿದೆ. ದಿನಾಂಕ:25.02.2016ರ ಮುಂಚಿತವಾಗಿ ಬೆಂಗಳೂರು ಜಲಮಂಡಳಿಯಿಂದ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆದಿದ್ದಲ್ಲಿ ಅಂತಹ ಕಟ್ಟಡಗಳಿಗೆ ನೀರಿನ ಬಿಲ್ಲಿನಲ್ಲಿ ದಂಡವನ್ನು ವಿಧಿಸುತ್ತಿರುವುದಿಲ್ಲ.
ಆ	ಬಂದಿದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯನ್ನು ಹೊರತುಪಡಿಸಿ, ಸ್ಥಳೀಯ ಸಂಸ್ಥೆಗಳಿಂದಲೂ ಸಹ ಓ.ಸಿ/ಸಿ.ಸಿ ನೀಡಲಾಗುವುದೇ;	ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 190 ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ಕಲಂ 310 ಹಾಗೂ ಕರ್ನಾಟಕ ಮುನಿಸಿಪಾಲಿಟೀಸ್ ಬಿಲ್ಡಿಂಗ್ ಬೈಲಾಗಳು 2017ರನ್ವಯ ಕಟ್ಟಡ ಕಟ್ಟುವುದು ಅಥವಾ ಕಟ್ಟಡ ಕೆಲಸ ನಿರ್ವಹಿಸುವುದು ಮುಕ್ತಾಯವಾದ ಒಂದು ತಿಂಗಳ ಒಳಗಾಗಿ ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಕಟ್ಟಡ ಮುಕ್ತಾಯವಾಗಿರುವ ಬಗ್ಗೆ ತಿಳಿಸಿ ಸ್ವಾಧೀನ ಪ್ರಮಾಣ ಪತ್ರವನ್ನು ಕೋರಬೇಕಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಯ ಮುಖ್ಯಸ್ಥರು ನೋಟೀಸ್ ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಪರಿಶೀಲಿಸಿ ನಿಯಮಾನುಸಾರ ಸ್ವಾಧೀನ ಪ್ರಮಾಣ ಪತ್ರ ನೀಡಲು ಕ್ರಮವಹಿಸಲಾಗುತ್ತದೆ.
ಇ	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿಗೆ ಒಳಪಡಿಸುವುದಕ್ಕೂ ಮೊದಲೇ ಕಟ್ಟಲಾಗಿದ್ದ ಕಟ್ಟಡಗಳಿಗೆ ಓ.ಸಿ/ಸಿ.ಸಿ ಇಲ್ಲದಿರುವುದರಿಂದ ದಂಡದ ರೂಪದಲ್ಲಿ ದಂಡವನ್ನು ನೀರಿನ ಬಿಲ್ಲಿನಲ್ಲಿ ವಸೂಲಿ ಮಾಡುತ್ತಿರುವುದು ಸರಿಯೇ;	ದಿನಾಂಕ: 25.02.2016 ರ ಮುಂಚಿತವಾಗಿ ಬೆಂಗಳೂರು ಜಲಮಂಡಳಿಯಿಂದ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆದಿದ್ದಲ್ಲಿ ಅಂತಹ ಕಟ್ಟಡಗಳಿಗೆ ನೀರಿನ ಬಿಲ್ಲಿನಲ್ಲಿ ವಾಸ ಪ್ರಮಾಣ ಪತ್ರ (ಓ.ಸಿ) ಸಲ್ಲಿಸದಿರುವ ಪ್ರಕರಣಗಳಿಗೆ ದಂಡವನ್ನು ವಿಧಿಸುತ್ತಿರುವುದಿಲ್ಲ. ಬೆಂಗಳೂರು ನೀರು ಸರಬರಾಜು ವಿನಿಯಮಗಳು, 2015ರ ವಿನಿಯಮ 5.4ಕ್ಕೆ ತಿದ್ದುಪಡಿ ಮಾಡಿ ಬೆಂಗಳೂರು ಜಲಮಂಡಳಿಯಿಂದ ದಿನಾಂಕ: 25.02.2016ರಂದು ಈ ಕೆಳಗಿನಂತೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.
ಈ	ಮೂಲ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಿತಿ ಇತ್ತೀಚಿನ	

<table>
<tr>
<td></td>
<td>ವರ್ಷಗಳಲ್ಲಿ ಬಹಳವಾಗಿ ಬೆಳೆದಿದ್ದು, ಈ ರೀತಿಯ ನೀರಿನ ಶುಲ್ಕದಿಂದ ನಾಗರೀಕರಿಗೆ ಆರ್ಥಿಕ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td>
<td>
<table>
<tr><th>Clause</th><th>Particulars</th></tr>
<tr><td></td><td>"5.4 Production of Occupancy Certificate-</td></tr>
<tr><td>a)</td><td>In case of Multistoried residential and Non-residential buildings excluding ground floor+ 2 floor, for water and sanitary connection, the applicant shall produce Occupancy Certificate issued by the Bruhat Bangalore Mahanagara Palike or Local Authorities an evidence to show that his application for occupancy is not refused by the Commissioner, Bruhat Bangalore Mahanagara Palike with thirty days of his application before sanction.</td></tr>
<tr><td>b)</td><td>In case of non-production of documents specified in clause (a) applicant in respect of domestic connection, temporary water and sanitary connection may be sanctioned subject to additional levy of fifty percent of total water and sanitary charges.</td></tr>
<tr><td>c)</td><td>In case of non-production of documents specified in clause (a) by the applicant in respect of non-domestic connection, temporary water and sanitary connection may be sanctioned subject to additional levy of hundred percent of total water and sanitary charges."</td></tr>
</table>
ಮೇಲ್ಕಂಡ ವಿನಿಯಮದ ಪ್ರಕಾರ ಬೆಂಗಳೂರು ಜಲಮಂಡಳಿಯಿಂದ ದಂಡ ವಿಧಿಸಲಾಗುತ್ತಿದೆ.
</td>
</tr>
</table>

ಸಂಖ್ಯೆ: ನಅಇ 35 ಎಂಎನ್‌ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ